


★ ಸಸಿತೋಟ

ನ್ಯೂಯಾರ್ಕ್‌ನ ಮದ್ಯ ತಯಾರಿಕಾ ಕಂಪೆನಿಯೊಂದು ರೈಲ್ವೆ ಇಲಾಖೆಯ ವಿಳಂಬ ನೀತಿ ಟೀಕಿಸಿ 'ಡಿಲೇಡ್' ಎಂಬ ಬಿಯರ್ ಅನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆಯಂತೆ. ತಡವಾಗಿ ಆಗಮಿಸುವ ರೈಲಿಗೆ ಕಾಯುತ್ತ ನಿಲ್ಲುವ ಪ್ರಯಾಣಿಕ ಡಿಲೇಡ್ ಆಸ್ವಾದಿಸುತ್ತ ನಿಲ್ಲಬಹುದು ಎಂಬುದು ಕಂಪೆನಿಯ ಅಂಬೋಣ. ಆದರೆ ಕಿಕ್ ಹೊಡೆಯಲೂ ಡಿಲೇ ಮಾಡಿದರೆ....



ಜೋರ್ಡಾನಿನ ಮಜಿದ್ ಎಂಬಾತ ಅಲ್ ಜಝೀರ ಟಿವಿಗೆ ಸ್ಕೈಪ್ ಮೂಲಕ ನೀಡಿದ ಸಂದರ್ಶನದ 'ಬಿಹೈಂಡ್ ದಿ ಸೀನ್' ವಿಡಿಯೋ. ಆತನ ಮಗ ಚಿತ್ರೀಕರಿಸಿ ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಟ್ಟದ್ದು ಈಗ ವೈರಲ್ ಆಗಿದೆ. ಷರ್ಟ್ ಇದೆ, ಬ್ಲೇಜರ್, ಟೈ ಕೂಡಾ ಇವೆ. ಆದರೆ ಪ್ಯಾಂಟ್ ಎಲ್ಲಿ ಎಂದು ಎಲ್ಲರೂ ಕೇಳುತ್ತಿದ್ದು, ಮಜಿದ್ ಸೆಕೆಯ ಕಾರಣ ನೀಡುತ್ತಿದ್ದಾನಂತೆ. ಎಷ್ಟೋ ವರ್ಷಗಳಿಂದ ರಾಜಕೀಯ ವಿಶ್ಲೇಷಕನಾಗಿರುವ ಮಜಿದ್ ಜನಪ್ರಿಯತೆ ಈಗ ಏರಿದ್ದಂತೂ ಮೈನಸ್ ಪ್ಯಾಂಟಿನ ಕಾರಣದಿಂದಲೇ.



ಜಪಾನಿನ ಈ ಮಿಯಾಂವ್ ಜೋಡಿ ಪಿಯಾನೊದಿಂದ ಸ್ವರ ಹೊರಡಿಸುವಷ್ಟು ಪರಿಣತಿ ಸಾಧಿಸಿದೆಯಂತೆ. ಈ ಮೊದಲು ಮನೆ ಬಾಗಿಲಿನ ಬೆಲ್ ಬಾರಿಸುವ ಮೂಲಕ ಸುದ್ದಿಯಾಗಿದ್ದ ಈ ಜೋಡಿ ಸಮಾರಂಭವೊಂದರಲ್ಲಿ ಜುಗಲ್‌ಬಂದಿ ರಸದೌತಣ ನೀಡಿತಂತೆ. ಮಧ್ಯೆ ಮಧ್ಯೆ ಇಷ್ಟದ ತಿಂಡಿ ನೀಡದಿದ್ದರೆ ಪಿಯಾನೊ ಜೊತೆ ಮಿಯಾಂವ್ ರಾಗವೂ ಸೇರಬಹುದು.



ಶ್ರೀಮಂತ ದೇಶ ಸಿಂಗಪುರದಲ್ಲಿ ಅಪರಾಧ ಪ್ರಮಾಣ ಅತ್ಯಂತ ಕಡಿಮೆಯಂತೆ. ಕೆಲಸವಿಲ್ಲದೇ ಸಣ್ಣಪುಟ್ಟ ಅಪರಾಧಗಳನ್ನೂ ಭೂತಗನ್ನಡಿ ಹಾಕಿ ನೋಡುವ ಪೊಲೀಸರಿಗೆ ಕಂಡಿದ್ದು ಸಾರ್ವಜನಿಕ ಸಾರಿಗೆಗೆ ಸೇರಿದ ಬಸ್ ಸೀಟಿಗೆ ಚುಚ್ಚಿದ 3 ಹಲ್ಲುಕಡ್ಡಿಗಳು. ಅಪರಾಧಿ 60 ವರ್ಷ ವಯಸ್ಸಿನ ವೃದ್ಧ ಎಂಬುದು ಸಿಸಿಟಿವಿ ಮೂಲಕ ಪತ್ತೆಯಾಗಿದ್ದು 2 ವರ್ಷ ಸೆರೆವಾಸ ಶಿಕ್ಷೆ ವಿಧಿಸಲು ತಯಾರಿ ನಡೆಸಿದ್ದಾರಂತೆ. ಪೊಲೀಸರಿಗೇ ಕೆಲಸವಿಲ್ಲದಿದ್ದಾಗ ಆ ವೃದ್ಧ ಯಾಕೆ ಕೆಲಸ ಮಾಡಲು ಹೋದನೋ!




ಕ್ಯಾಲಿಫೋರ್ನಿಯಾದಲ್ಲಿ ಮನೆ ಖರೀದಿ ಎಲ್ಲರ ಕನಸಾದರೆ, ಅಲ್ಲಿಯ ದಂಪತಿ ಟೀನಾ ಮತ್ತು ಮೈಕೇಲ್ ರಸ್ತೆಯೊಂದನ್ನು 90 ಸಾವಿರ ಡಾಲರ್‌ಗೆ ಖರೀದಿಸಿ ಅಲ್ಲಿಯ ನಿವಾಸಿಗಳ ಕೆಂಗಣ್ಣಿಗೆ ಗುರಿಯಾಗಿದ್ದಾರಂತೆ. ಸಿರಿವಂತರೇ ಹೆಚ್ಚಾಗಿ ವಾಸಿಸುತ್ತಿರುವ ಪೆಸಿಡೊ ಟೆರೇಸ್ ರಸ್ತೆಯನ್ನು ತೆರಿಗೆ ಬಾಕಿ ಉಳಿಸಿಕೊಂಡಿದ್ದಕ್ಕೆ ಆಡಳಿತ ಹರಾಜು ಹಾಕಿತ್ತಂತೆ. ಈಗ ರಸ್ತೆ, ಪಾದಚಾರಿ ಮಾರ್ಗ, ಆಟದ ಮೈದಾನ ಎಲ್ಲವೂ ದಂಪತಿಗೆ ಸೇರಿದೆ. ಮನೆ ಇಲ್ಲದಿದ್ದರೆ ಏನಂತೆ, ರಸ್ತೆಯಾದರೂ ಸಿಕ್ಕಿತಲ್ಲ ಎಂದು ದಂಪತಿ ಖುಷಿಯಾಗಿದ್ದಾರಂತೆ.

ಆಸ್ಟ್ರೇಲಿಯಾದ ಹ್ಯಾಂಡ್‌ಸಂ ಹರ್ ಎಂಬ ಕೆಫೆ ಲಿಂಗ ತೆರಿಗೆ ಹಾಕಲು ಶುರು ಮಾಡಿದೆಯಂತೆ. ಅಂದರೆ ಕೆಫೆಗೆ ಬರುವ ಪುರುಷ ಗ್ರಾಹಕರಿಗೆ ಶೇ 18ರಷ್ಟು ತೆರಿಗೆ ಹಾಕುತ್ತಿದೆಯಂತೆ. ಉದ್ಯೋಗದಲ್ಲಿ ವೇತನ ತಾರತಮ್ಯ ವಿರೋಧಿಸಿ ಈ ಕರ ಚಳವಳಿ ಆರಂಭವಾಗಿದೆಯಂತೆ. ವಿಶೇಷವೆಂದರೆ ಪುರುಷರು ಎಲ್ಲೆಲ್ಲಿಂದಲೋ ಈ ಕೆಫೆ ಹುಡುಕಿಕೊಂಡು ಬರುತ್ತಿದ್ದಾರಂತೆ.